# 2014-15 ನೇ ಸಾಲಿಗೆ ಆಯ್ಕೆಯಾದ ಹಾವೇರಿ ಜಿಲ್ಲೆಯ ಯುವ ಕೃಷಿ ಮಹಿಳೆ

## ಆವಿಷ್ಕಾರ ಮಾಡಿದ ಯುವ ಕೃಷಿ ಮಹಿಳೆ




**ಶ್ರೀಮತಿ ನೀಲಾಂಬಿಕಾ ಬಸವರಾಜ ಕುರಗೋಡಿ**
ಗ್ರಾಮ: ನಾರಾಯಣಪುರ
ತಾ: ಶಿಗ್ಗಾಂವ್   ಜಿ: ಹಾವೇರಿ
ಮೊ: 9743149598

ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಮುಖ್ಯವಾಗಿ ಮಹಿಳೆಯರು ಕೃಷಿಯನ್ನು ತಮ್ಮ ಉದ್ಯೋಗವನ್ನಾಗಿ ಪರಿಗಣಿಸಿರುವುದು ವಿರಳ, ಆದರೆ ಶ್ರೀಮತಿ ನೀಲಾಂಬಿಕಾ ಬಸವರಾಜ ಕುರಗೋಡಿಯವರು ತಮ್ಮ 50 ಎಕರೆ ಜಮೀನಿನಲ್ಲಿ ಏಕಬೆಳೆಗಳಾದ ಸೋಯಾಅವರೆ, ಬಹುಬೆಳೆ ಗೋವಿನ ಜೋಳ ಮತ್ತು ತೊಗರಿ, ಅಲಸಂದಿ, ಶೇಂಗಾ ಉದ್ದು ಬೆಳೆಯನ್ನು ಮಿಶ್ರ ಬೆಳೆಯಾಗಿ ಮಾಡಿದದು ತೋಟಗಾರಿಕೆಯಲ್ಲಿ ತೆಂಗು, ಮಾವು, ಸಾಗವಾನಿ ಹೊಂದಿದ್ದಾರೆ. ಇದರ ಜೊತೆ ಹೈನುಗಾರಿಕೆಯನ್ನು ಸಹ ಹೊಂದಿದ್ದು ನೀರಿನ ಸದ್ಬಳಕೆಗಾಗಿ ಕೃಷಿ ಹೊಂಡ ಹಾಗೂ ಜವಳು ನಿರ್ವಹಣೆಯ ಸಮಗ್ರ ವ್ಯವಸ್ಥೆ ಹೊಂದಿದ್ದಾರೆ. ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುವ ಇವರು ಎರೆಹುಳು ಗೊಬ್ಬರ ಹಾಗೂ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ ನಿರ್ವಹಣಾ ಕ್ರಮಗಳನ್ನು ಮಾಡಿದ್ದು ಇದರ ಜೊತೆಗೆ ಹನಿ ನೀರಾವರಿಯನ್ನು ಬೇರೆಯವರಿಗಿಂತ ಉಪಕರಣಗಳನ್ನೊಳಗೊಂಡು ಬೆಳೆಯನ್ನು ಬೆಳೆಯುತ್ತಾರೆ. ಕೃಷಿಗೆ ಬೇಕಾದ ಯಂತ್ರೋಪಕರಣಗಳನ್ನು ಸಹ ಹೊಂದಿದ್ದಾರೆ. ವರ್ಷಕ್ಕೆ 12 ಲಕ್ಷದಿಂದ 20 ಲಕ್ಷದವರೆಗೂ ಆದಾಯ ಪಡೆಯುವವರಾಗಿದ್ದಾರೆ.